ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 8/2/2020

# ಸಂಸತ್ತಿನಲ್ಲಿ ಮಂತ್ರಿ ಮೇಲೆ ಕಾಂಗ್ರೆಸ್‌ನಿಂದ ಹಲ್ಲೆ ಯತ್ನ

## ಆರೋಗ್ಯ ಸಚಿವ ಹರ್ಷವರ್ಧನ್ ಮೇಲೆರಗಿದ ಎಂಪಿ ಮಾಣಿಕ್ಯಂ

## ರಾಹುಲ್ ಹೇಳಿಕೆ ಖಂಡಿಸಿ ಮಾತಾಡಿದ್ದಕ್ಕೆ ಆಕ್ರೋಶ, ವಾಗ್ವಾಳಿ

## ನನ್ನ ಮೇಲೆ ಹಲ್ಲೆಗೆ ಯತ್ನಿಸಿ ಕಾಗದ ಕಸಿದುಕೊಂಡರು: ಸಚಿವ



ನವದೆಹಲಿ: ಲೋಕಸಭೆಯ ಪ್ರಶ್ನೋತ್ತರ ಕಲಾಪದ ವೇಳೆ ಉತ್ತರ ನೀಡುವ ಬದಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಟೀಕಿಸಲು ನಿಂತ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರ ಮೇಲೆ ಕಾಂಗ್ರೆಸ್ ಸಂಸದರೊಬ್ಬರು ಹಲ್ಲೆಗೆ ಮುಂದಾದ ಘಟನೆ ನಡೆದಿದೆ. ಹರ್ಷವರ್ಧನ ಅವರತ್ತ ನುಗ್ಗಿ ಬಂದ ತಮಿಳುನಾಡು ಕಾಂಗ್ರೆಸ್ ಸಂಸದ ಮಾಣಿಕ್ಯಂ ಟ್ಯಾಗೋರ್ ಅವರನ್ನು ಇತರೆ ಸಂಸದರು ತಡೆದಿದ್ದಾರೆ.

ಇದರ ಬೆನ್ನಲ್ಲೇ ಮಾಣಿಕ್ಯಂ ಅವರನ್ನು ಸದನದಿಂದ ಉಚ್ಚಾಟಿಸಬೇಕು ಎಂದು ಬಿಜೆಪಿ ಸಂಸದರು ಆಗ್ರಹಿಸಿದ್ದಾರೆ. ಹರ್ಷವರ್ಧನ್ ಹೇಳಿಕೆ, ಮಾಣಿಕ್ಯಂ ಹಲ್ಲೆ ಯತ್ನ ಹಾಗೂ ನಂತರ ನಡೆದ ಗದ್ದಲದಿಂದಾಗಿ ಲೋಕಸಭೆಯ ಕಲಾಪ ಬಲಿಯಾಗಿದೆ. ಕಾಂಗ್ರೆಸ್ ಹಾಗೂ ಕೇಂದ್ರ ಸರ್ಕಾರದ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಕರೆಸಿ ಸ್ಪೀಕರ್ ಅವರು ಸಮಾಲೋಚನೆ ನಡೆಸಿ, ಬಿಕ್ಕಟ್ಟು ಬಗೆಹರಿಸಲು ಯತ್ನಿಸಿದ್ದಾರೆ.

➘ 14

ಸಂಸತ್ತಿನಲ್ಲಿ ಮಂತ್ರಿ ಮೇಲೆ ಕಾಂಗ್ರೆಸ್‌ನಿಂದ ಹಲ್ಲೆ ಯತ್ನ

➘ ಮೊದಲ ಪುಟದಿಂದ

**ಆಗಿದ್ದೇನು?:** ವೈದ್ಯ ಕಾಲೇಜು ಸ್ಥಾಪನೆ ಕುರಿತಂತೆ ಕಾಂಗ್ರೆಸ್ಸಿನ ರಾಹುಲ್ ಗಾಂಧಿ ಅವರು ಪ್ರಶ್ನೆ ಕೇಳಿದ್ದರು. ಪ್ರಶ್ನೋತ್ತರ ಕಲಾಪದಲ್ಲಿ ಇದಕ್ಕೆ ಉತ್ತರ ನೀಡಬೇಕಾದ ಹರ್ಷವರ್ಧನ್ ಅವರು ಎದ್ದು ನಿಂತು, ರಾಹುಲ್ ಅವರ ಪ್ರಶ್ನೆಗೆ ಉತ್ತರ ನೀಡುವ ಬದಲು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವರು ನೀಡಿರುವ ಹೇಳಿಕೆಯನ್ನು ಖಂಡಿಸುವುದಾಗಿ ಹೇಳಿದರು. ಅವರು ತಮ್ಮ ಖಂಡನಾ ಭಾಷಣ ಮುಂದುವರಿಸುತ್ತಿದ್ದಾಗ ಕಾಂಗ್ರೆಸ್ ಸಂಸದರು ಅದನ್ನು ಪ್ರತಿಭಟಿಸಿ ಸದನದ ಬಾವಿಗೆ ಇಳಿದರು. ಈ ಹಂತದಲ್ಲಿ ತಮಿಳುನಾಡಿನ ಮಾಣಿಕ್ಯಂ ಟ್ಯಾಗೋರ್ ಅವರು ಆಕ್ರಮಣಕಾರಿಯಾಗಿ ಹರ್ಷವರ್ಧನ್ ಅವರತ್ತ ನುಗ್ಗಿಬಂದರು.

ಬಿಜೆಪಿಯ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಟ್ಯಾಗೋರ್ ಅವರನ್ನು ತಡೆದು ನಿಲ್ಲಿಸಿದರು. ಕೇರಳದ ಕಾಂಗ್ರೆಸ್ ಸಂಸದ ಹಿಬಿ ಈಡನ್, ಕೇಂದ್ರ ಸಚಿವೆ ಸ್ಮೃತಿ ಇರಾನಿ ಕೂಡ ಈ ಹಂತದಲ್ಲಿ ಮಧ್ಯಪ್ರವೇಶಿಸಿದರು.

ಇಷ್ಟಾದರೂ ಹರ್ಷವರ್ಧನ್ ಅವರು ಭಾಷಣ ನಿಲ್ಲಿಸಲಿಲ್ಲ. ಆರು ತಿಂಗಳ ಬಳಿಕ ಯುವಕರು ನರೇಂದ್ರ ಮೋದಿ ಅವರಿಗೆ ಕೋಲಿನಿಂದ ಹೊಡೆದು ದೇಶದಿಂದ ಓಡಿಸುತ್ತಾರೆ ಎಂದು ರಾಹುಲ್ ಹೇಳಿದ್ದಾರೆ. ಅವರ ತಂದೆ ರಾಜೀವ್ ಗಾಂಧಿ ಕೂಡ ಪ್ರಧಾನಿಯಾಗಿದ್ದವರು. ಅವರ ಬಗ್ಗೆ ಈ ರೀತಿ ಹೇಳಿಕೆಯನ್ನು ಯಾರೂ ನೀಡಿರಲಿಲ್ಲ ಎಂದು ಅವರು ತಿವಿದರು. ಗದ್ದಲ ಹೆಚ್ಚಾದ ಹಿನ್ನೆಲೆಯಲ್ಲಿ ಸ್ಪೀಕರ್ ಕಲಾಪವನ್ನು ಮುಂದೂಡಿದರು. ಈ ಸಂದರ್ಭದಲ್ಲಿ ಟ್ಯಾಗೋರ್ ಅವರನ್ನು ಸದನದಿಂದ ಬಹಿಷ್ಕರಿಸಬೇಕು ಎಂದು ಬಿಜೆಪಿ ಸಂಸದರು ಆಗ್ರಹಿಸಿದರು.

ಮತ್ತೆ ಕಲಾಪ ಆರಂಭವಾದಾಗ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಯಾರಾದರೂ ತಪ್ಪು ಮಾತನಾಡಿದರೆ ಆ ಬಗ್ಗೆ ಸ್ಪೀಕರ್ ನಿರ್ಧಾರ ತೆಗೆದುಕೊಳ್ಳಬೇಕು. ಆದರೆ ಸಚಿವರ ಮೇಲೆ ಹಲ್ಲೆ ಯತ್ನ ಖಂಡನೀಯ ಎಂದರು. ಈ ವೇಳೆ ಕಾಂಗ್ರೆಸ್ ಸಂಸದರೂ ಎದ್ದು ನಿಂತಾಗ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು. ಸಂಸತ್ತಿನ ಹೊರಗೆ ಸುದ್ದಿಗಾರರ ಜತೆ ಮಾತನಾಡಿದ ಹರ್ಷವರ್ಧನ್, ತಮ್ಮ ಭಾಷಣದ ವೇಳೆ ಕಾಂಗ್ರೆಸ್ ಸಂಸದರೊಬ್ಬರು ನನ್ನ ಆಸನದ ಬಳಿಗೆ ಬಂದು ಹಲ್ಲೆ ನಡೆಸಿ, ಕಾಗದಪತ್ರಗಳನ್ನು ಕಿತ್ತುಕೊಳ್ಳಲು ಯತ್ನಿಸಿದರು ಎಂದು ದೂರಿದರು.



ಲೋಕಸಭೆಯಲ್ಲಿ ಶುಕ್ರವಾರ ಬಿಜೆಪಿ-ಕಾಂಗ್ರೆಸ್ ಸದಸ್ಯರ ತಳ್ಳಾಟ.



ರಾಹುಲ್ ಗಾಂಧಿ ಕುರಿತು ಅಸಂಸದೀಯ ಪದ ಬಳಕೆ ಮಾಡಿದ್ದಕ್ಕೆ ಸಚಿವ ಹರ್ಷವರ್ಧನ್ ಕ್ಷಮೆ ಯಾಚಿಸಬೇಕು. ರಾಹುಲ್ ಗಾಂಧಿ ಗೌರವಕ್ಕೆ ಹಾನಿ ಮಾಡಲು ಅವರು ಪೂರ್ವ ಯೋಜನೆ ಹಾಕಿಕೊಂಡೇ ಈ ಪದವನ್ನು ಬಳಕೆ ಮಾಡಿದ್ದಾರೆ.

• **ಅಧೀರ್ ರಂಜನ್ ಚೌಧರಿ**
ಕಾಂಗ್ರೆಸ್ ನಾಯಕ



ರಾಹುಲ್ ಸೂಚನೆ ಅನ್ವಯ ಕಾಂಗ್ರೆಸ್ ಸಂಸದ ಮಾಣಿಕ್ಯಂ ಟ್ಯಾಗೋರ್, ಸಚಿವರ ಜೊತೆ ಅಸಭ್ಯವಾಗಿ ನಡೆದುಕೊಂಡಿದ್ದಾರೆ. ಟ್ಯಾಗೋರ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಘಟನೆ ಕುರಿತು ರಾಹುಲ್ ಗಾಂಧಿ ಕ್ಷಮೆಯಾಚಿಸಬೇಕು.

• **ಪ್ರಹ್ಲಾದ್ ಜೋಶಿ**
ಸಚಿವ